# 13

# ದೇವರ ಸತ್ಯ ಮತ್ತು ಮಾನವನ ತಪ್ಪುಗಳು

## (2 ಥೆಸಲೊನೀಕ 2:1-12)

ಅನೇಕರು, ವೃದ್ಧಾಪ್ಯವನ್ನು ಸಾಮರ್ಥ್ಯದ ಬಲಹೀನತೆಯೆಂದು ತಿಳಿಯುವರು ಮತ್ತು ಸ್ನೇಹಿತರನ್ನು, ಸಂಬಂಧಿಕರನ್ನು ಕಳಕೊಳ್ಳುವದೆಂದು ತಿಳಿಯುವರು. ಈ ಸಂದರ್ಭದಲ್ಲಿ, ನಶಿಸಿಹೋಗದ ನಿತ್ಯವಾದ ಆದಾಯಗಳನ್ನು ಸಂತೋಷಿಸುವದು ಸಹಜವಾಗಿರುತ್ತದೆ. ಕ್ರೈಸ್ತರಿಗೆ ಈ ಜೀವಿತದ ಅಂತ್ಯವು ಮಾನ ಹಾಗೂ ಮಹಿಮೆಯ ಶಿಖರವಾಗಿರುತ್ತದೆ. ಮರಣದ ಮೊದಲೇ ಯೇಸು ಬರುವುದಾದರೆ, ನಾವು ಮಹಿಮೆಯುಳ್ಳ ಪುನಃ ಸೇರುವಿಕೆಯನ್ನು ಅನುಭವಿಸುವೆವು.

ಥೆಸಲೊನೀಕದ ಕ್ರೈಸ್ತರು ಈಗಾಗಲೇ ಮರಣ ಹೊಂದಿ ಮಹಿಮೆಯುಳ್ಳ ಪುನಃ ಸೇರುವಿಕೆಯ ಅನುಭವವನ್ನು ಹೊಂದಲು ಸಾಧ್ಯತೆಯಿಲ್ಲದವರ ಕುರಿತು ಚಿಂತಿಸುತ್ತಿದ್ದರು. ಯೇಸುವಿನ ಬರೋಣದಲ್ಲಿ ನಂಬಿಗಸ್ತರಾದ ಕ್ರೈಸ್ತರ ಮರಣವು ಯೇಸುವಿನ ಪುನರಾಗಮನದ ಆನಂದಕ್ಕೆ ಅಡ್ಡಿಪಡಿಸಲಾರದು.

2 ಥೆಸಲೊನೀಕ ಪತ್ರಿಕೆಯನ್ನು ಬರೆಯುವಂತ ಸಮಯದಲ್ಲಿ ಯೇಸುವಿನ ಪುನರಾಗಮನವು ಈಗಾಗಲೇ ಸಂದುಹೋಗಿದೆಯೆಂಬುದಾಗಿ ಬಾವಿ ಅವರು ಬೇಸರ ಗೊಂಡಿದ್ದರು. ಇದು ನಿಜವಾಗಿದ್ದರೆ ಅವರುಗಳು ಮತ್ತು ಈಗಾಗಲೇ ಮರಣ ಹೊಂದಿದ್ದ ಅವರ ಸಹೋದರರು ಆತನ ಬರೋಣದ ಪುನಃ ಸೇರುವಿಕೆಯಲ್ಲಿ ಪಾಲುತೆಗೆದುಕೊಳ್ಳುವದು ಅಸಾಧ್ಯವಾಗಿತ್ತು. ಮೊದಲ ಪತ್ರಿಕೆಯಂತೆಯೇ, ಎರಡನೆಯ ಪತ್ರಿಕೆಯು ಸಹ ಕ್ರಿಸ್ತನ ಪುನರಾಗಮನದ ಕುರಿತಾಗಿ ಸಂತೈಸುವಿಕೆಯನ್ನು ನೀಡುವಂತ ಯೋಜನೆಯ ಪತ್ರಿಕೆಯಾಗಿತ್ತು. ಈ ತಪ್ಪುಗಳಿಗೆ ವಿರೋಧವಾಗಿ, ಈ ಸತ್ಯವು ಕ್ರೈಸ್ತರಿಗೆ ಭವಿಷ್ಯವಿದೆಯೆಂದು ದೃಢಪಡಿಸುತ್ತದೆ.

ತಪ್ಪು ಪ್ರವಾದನೆಗಳು ಯಾವಾಗಲೂ ಅಪಾಯಕಾರಿಯಾಗಿರುತ್ತವೆ. ಅದು ಕ್ರೈಸ್ತರನ್ನು ಜೀವದ ಮಾರ್ಗದಿಂದ ಹಾದಿ ತಪ್ಪಿಸುತ್ತದೆ. ಅದು ನಮ್ಮನ್ನು ಉತ್ತಮವಾದಂತ ಸಂಗತಿಯಿಂದ ತಪ್ಪಿಸುತ್ತದೆ. ದೈವಭಕ್ತಿಗೆ ಅನುಕೂಲವಾದಂತ ಮೂಲಗ ಳನ್ನು ನಾಶಪಡಿಸುತ್ತದೆ. ಅಪಾಯ ಉಂಟುಮಾಡುವಂತ ತಪ್ಪು ಬೋಧನೆಗಳನ್ನು ಹೇಗೆ ತಡೆಗಟ್ಟಬಹುದು? ಅದರಲ್ಲಿರುವ ಭಯವನ್ನು ಹೇಗೆ ನಿವಾರಿಸಬಹುದು?

### ತಪ್ಪು ಬೋಧನೆಯನ್ನು ಕಂಡುಹಿಡಿಯಿರಿ (2:1-5)

ಸಭಾ ಚರಿತ್ರೆಯಲ್ಲಿ ಆಗಾಗ್ಗೆ ಕೆಲವು ವ್ಯಕ್ತಿಗಳು ಹೊಸ ಬೋಧನೆಯನ್ನು ಬೋಧಿಸಿ ವ್ಯತ್ಯಾಸಕರವಾದ ಹಾಗೂ ಗೊಂದಲಮಯವಾದ ಬೋಧನೆಗಳನ್ನು ಬೋಧಿ ಸಿರುವರು. ಪದೇ ಪದೇ ಪ್ರವಾದನೆಗಳ ನೇರವಣಿಕೆಯ ಬಗ್ಗೆ ಬೋಧಿಸಲಾಗಿದೆ. ಹಳೆ ಒಡಂಬಡಿಕೆಯ ಪ್ರವಾದನೆಗಳ ಮೇಲೆ ದೃಷ್ಟಿಯಿಟ್ಟು, ಕರ್ತನ ಬರುವಿಕೆಯ ಬಗ್ಗೆಯೂ ಆತನ ರಾಜ್ಯದ ಪುನಃ ಸ್ಥಾಪನೆಯ ಬಗ್ಗೆಯೂ ಅಥವಾ ಹೊಸ ಒಡಂಬಡಿಕೆಯಲ್ಲಿರತಕ್ಕಂತ, ಕರ್ತನ ಬರೋಣದಲ್ಲಿ ಉಂಟಾಗುವ ನ್ಯಾಯತೀರ್ಪಿನ ಕುರಿತ ಪ್ರವಾದನೆಯ ಬೋಧನೆಯನ್ನು ಮಾಡಲಾಗುತ್ತದೆ.

ಅನೇಕ ಸಂದರ್ಭಗಳಲ್ಲಿ ಜನರು ಯೇಸುವಿನ ಬರೋಣದ ಬಗ್ಗೆ ಪ್ರವಾದಿಸಿ ಅಥವಾ ಯೇಸು ಕ್ರಿಸ್ತನು ಈಗಲೇ ರಹಸ್ಯವಾಗಿ ಬಂದಿರುವನೆಂದು ಭವಿಷ್ಯ ನುಡಿದಿದ್ದಾರೆ. ಜನರು ಈ ಸಾಮಾನ್ಯವಾದ ಪ್ರಕಟನೆಯ ಕುರಿತು ಆಶ್ಚರ್ಯಪಟ್ಟು ಮತ್ತು ಭಯದಿಂದ

ಅವರ ನಂಬಿಕೆಯನ್ನು ಮತ್ತು ಜೀವಿತವನ್ನು ಬದಲಿಸಿಕೊಳ್ಳುತ್ತಾರೆ. ಇಂತಹ ತಪ್ಪುಗಳನ್ನು ಕಂಡುಹಿಡಿದು ಸತ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು?

ಮೊದಲನೆಯದಾಗಿ, ಆ ತಪ್ಪುಗಳ ಮೂಲವನ್ನು ಕಂಡು ಹಿಡಿಯಬೇಕು. ಇತರರು ಕಂಡು ಹಿಡಿಯದಿರುವ ಬೋಧನೆಯನ್ನು ಒಬ್ಬ ವ್ಯಕ್ತಿಯು ಪರಿಚಯಿಸುವಾಗ, ಅಥವಾ ಒಬ್ಬ ವ್ಯಕ್ತಿಯು ವಿಶೇಷವಾದ ಪ್ರಕಟನೆಯನ್ನು ಮತ್ತು ಆಳವಾದ ದೃಷ್ಟಿಯನ್ನು ಹೊಂದಿದ್ದೆನೆಂದು ದೃಢಪಡಿಸುವಾಗ, ಅಥವಾ ಇತರರೆಲ್ಲರೂ ತಪ್ಪು ಎಂದು ದೃಢಪಡಿಸುವಾಗ ಆ ಬೋಧನೆಗಳು ಒಂದು ನಿರ್ದಿಷ್ಟವಾದ ಸ್ಥಳದಲ್ಲಿದೆ ಅಥವಾ ಸತ್ಯವೇದದ ವಾಕ್ಯಭಾಗದ ಒಂದು ಸೂಚನೆಯೆಂದು ತಿಳಿಸು, ಸಂಪೂರ್ಣವಾದ ಪ್ರಕಟನೆಯು ಹೊಸ ಒಡಂಬಡಿಕೆಯ ಅಪೊಸ್ತಲರಿಂದಲೂ ಮತ್ತು ಪ್ರವಾದಿಗಳಿಂದಲೂ ನೀಡಲಾಯಿತೆಂದು ನಂಬುವದಿಲ್ಲ.

ಆ ಹೊಸ ಪ್ರಕಟನೆಯ ಕುರಿತು ಕ್ರೈಸ್ತರಿಗೆ (2:1, 2)ರ, ಭಾಗದಲ್ಲಿ ತಿಳಿಸಲಾಗಿದೆ, ಒಂದು ವೇಳೆ ಅಪೊಸ್ತಲರು ಹೇಳಿದ್ದಾರೆ ಎಂದು ತಿಳಿಸಿರಬಹುದು, ಈ ರೀತಿ ಯಾರಾದರೂ ಹೇಳಿರುವುದಾದರೆ, ನೀವು ಬೇಗನೆ ಬುದ್ಧಿಗೆಟ್ಟು "ಚಂಚಲರಾಗಿ ಕಳವಳಪಡಬೇಡಿರಿ," ಯಾಕೆಂದರೆ ಅದು ಮೋಸಕರವಾದದ್ದೆ. ಅವರು ಎಚ್ಚರವುಳ್ಳವರಾಗಿರಬೇಕಿತ್ತು. ಆ ಹೊಸ ಬೋಧನೆ ಯಾವುದೇ ವಿಧವಾದ ಹೊಸತನವನ್ನು ಹೊಂದಿದ್ದರೂ, ಆ ಬೋಧನೆಯ ಬಗ್ಗೆ ಎಚ್ಚರವುಳ್ಳವರಾಗಿರಬೇಕು. ಅದು ಮನುಷ್ಯ ಕಲ್ಪಿತವಾಗಿರಬಹುದೆ, ಹೊರತು ದೇವರ ಪ್ರಕಟನೆಯಾಗಿರಲಾರದು.

ಎರಡನೆಯದಾಗಿ, ಆ ಬೋಧನೆಯನ್ನೇ ಪರಿಶೀಲಿಸಬೇಕು. ಈ ಬೋಧನೆಯು ಕರ್ತನಾದ ಯೇಸುವಿನ ಮತ್ತು ಪ್ರೇರಿತರಾದ ಉಪದೇಶಕರಿಂದಲೂ ಬೋಧಿಸಲ್ಪಟ್ಟ ಬೋಧನೆಗೆ ಸರಿಸಮಾನವಾಗಿದೆಯೇ ಎಂದು ಅರಿಯಬೇಕು? ಒಂದು ವೇಳೆ ಅದು ಸತ್ಯವಲ್ಲ ಎಂದು ಗ್ರಹಿಸಬೇಕು. ತಪ್ಪು ಬೋಧನೆಗಳನ್ನು ಕಂಡುಹಿಡಿಯಲು ಅಸಾಧ್ಯವಾಗಬಹುದು; ಆದರೆ ನಾವು ಸತ್ಯವನ್ನು ಅರಿತವರಾದರೆ, ಹೊಸ ಬೋಧನೆಯು ಅದಕ್ಕೆ ವ್ಯತಿರಿಕ್ತವಾಗಿದ್ದರೆ, ಅದು ತಪ್ಪಾದದ್ದೆ.

ಅದು ನಿಮ್ಮ ತಂದೆ ತಾಯಿಯನ್ನು ಅರಿಯುವಂತೆ. ಇತರರು ಬಂದು ಅವರು ನಿಮ್ಮ ತಂದೆ ತಾಯಿಗಳು ಎಂದು ದೃಢಪಡಿಸುವುದಾದರೆ, ನೀವು ಅವರನ್ನು ಅರಿಯದೆ ಅವರು ಏಕೆ ಹೀಗೆ ಮಾಡುತ್ತಿರುವರು ಎಂದು ತಿಳಿದಿದಾದರೆ, ಅವರು ಹೇಳುವಂಥದ್ದು ಸುಳ್ಳು ಎಂದು ಗ್ರಹಿಸುವಿರಿ. ಅವರು ನಿಮ್ಮ ತಂದೆ ತಾಯಿಗಳಲ್ಲ. ಅದೇ ರೀತಿಯಲ್ಲಿ, ನೀವು ಅರಿತಿರುವ ಸತ್ಯವು ಅದನ್ನು ಮೌಲ್ಯಮಾಪನ ಮಾಡಲು ಸಹಕರಿಸುತ್ತದೆಂದು, ಅದನ್ನು ತಿಳಿಯಬಹುದು, ಅದರ ಬಗ್ಗೆ ಎಚ್ಚರವುಳ್ಳವರಾಗಿರಬೇಕು.

ಚಿಂತೆಯಲ್ಲಿದ್ದು, ಗೊಂದಲಕ್ಕೊಳಗಾಗಿರುವ, ಥೆಸಲೊನೀಕದವರು ಯೇಸುವಿನ ಪುನರಾಗಮನದ ಸತ್ಯವನ್ನು ಅರಿತಿದ್ದರು ಎಂದು ದೃಢಪಡಿಸಲಾಗಿತ್ತು (2 ಥೆಸಲೊನೀಕ 2:5). ಅವರು ಈಗಾಗಲೇ ಸ್ವೀಕರಿಸಿದ್ದ ಸತ್ಯವನ್ನು ಅರಿತಿದ್ದರೆ, ಅದರ ಮೂಲಕ ತಪ್ಪು ಬೋಧನೆಗಳನ್ನು ಕಂಡುಹಿಡಿಯಲು ಸಾಧ್ಯವಿತ್ತು. ಈ ತಪ್ಪುಗಳು ಯಾವಾಗ ಮತ್ತು ಯಾರಿಂದ ಉದ್ಭವಿಸಬಹುದು ಎಂದು ಅವರಿಗೆ ತಿಳಿಸಲ್ಪಟ್ಟಿರಲಿಲ್ಲ. ಆದರೆ ಅದು ತಪ್ಪು ಎಂದು ಗ್ರಹಿಸಲು ಶಕ್ತರಾಗಿದ್ದರು ಮತ್ತು ಅಂತಹ ಬೋಧಕರು ದೇವರಿಗೆ ವಿರುದ್ಧವಾದವರು ಎಂದು ತಿಳಿಯಲು ಸಹ ಸಾಧ್ಯವಿತ್ತು.

ದೇವರು ಸತ್ಯದ ವಿರೋಧಿಗಳು, ದೇವರಿಗೆ ವಿರೋಧಿಗಳೇ ಧಾರ್ಮಿಕವಾಗಿ ತಾವುಗಳು ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಂಡು, ಜನರ ಮನಸ್ಸಿನಲ್ಲಿರುವ ದೇವಸ್ಥಾನವನ್ನು ಬದಲಾಯಿಸಲು ಪ್ರಯತ್ನಿಸುತ್ತಾರೆ. ಅವರು ದೇವರ ವಿರೋಧಿಗಳು ಎಂದು ಗುರುತಿಸಲ್ಪಡಬೇಕು. ದೇವರ ಜನರು ಸತ್ಯವನ್ನು ಅರಿತ್ತಿದ್ದರೆ ಮಾತ್ರ ಅದು ಸಾಧ್ಯ.

ಸತ್ಯವನ್ನು ಧ್ಯಾನಿಸಿರಿ! ಸತ್ಯವನ್ನು ಕಲಿಯಿರಿ! ಸತ್ಯದ ಸಂಗಡ ಜೀವಿಸಿರಿ! ತಪ್ಪು

ಬೋಧನೆಗಳಿಗೆ ಇದು ಉತ್ತಮವಾದ ಆಯುಧವಾಗಿರುತ್ತದೆ! ವಾಕ್ಯವನ್ನು ಅರಿಯದೆ ಇರುವದು, ವಾಕ್ಯದ ಅಲಕ್ಷ್ಯ ವಾಕ್ಯವನ್ನು ಗಮನಿಸದೆ ಇರುವದು, ತಪ್ಪು ಬೋಧನೆಗಳಿಗೆ ತೆರೆದ ಬಾಗಿಲಾಗಿರುತ್ತದೆ. ಸತ್ಯವನ್ನು ಅರಿಯಿರಿ. ಸತ್ಯಮಾತ್ರ ಬಿಡುಗಡೆ ನೀಡುತ್ತದೆ (ಯೋಹಾನ 8:32). ಇದರ ಮೂಲಕ ತಪ್ಪನ್ನು ಕಂಡುಹಿಡಿಯಬಹುದು.

## ಸತ್ಯೋಪದೇಶವನ್ನು ಪುನಃ ಹೊಂದಿಕೊಳ್ಳಿರಿ (2:6-9)

ಸತ್ಯವು ಯಾವಾಗಲೂ ಸತ್ಯವೇ ಆಗಿರುತ್ತದೆ, ಅದನ್ನು ಮರೆಯಲು ಸಾಧ್ಯವಿಲ್ಲ, ಬೇಸರದ ಸಮಯದಲ್ಲೂ ಮರೆಯಲು ಸಾಧ್ಯವಿಲ್ಲ. ನಂಬಿಕೆಯ ಕುರಿತಾದ ಮೂಲಭೂತ ಸತ್ಯಗಳನ್ನು ಪದೇ ಪದೇ ನೆನಪು ಮಾಡಬೇಕು, ಅದರಿಂದ ಸಂಕಷ್ಟದ ಸಮಯದಲ್ಲಿ ಸಮಾಧಾನವನ್ನು ಧೈರ್ಯವನ್ನು ಹೊಂದಲು ಸಾಧ್ಯವಾಗುತ್ತದೆ. ಮೂಲ ಸತ್ಯಗಳನ್ನು ಒತ್ತಿ ಹೇಳುವದನ್ನು ಮುಂದುವರಿಸದೆ ಹೋದರೆ, ನಮ್ಮ ನಂಬಿಕೆಯ ಬುನಾದಿಯು ದೃಢವಾಗಿ ಉಳಿಯುವದಿಲ್ಲ.

ಒಳ್ಳೆಯ ಸತ್ಯವೇದ ಬೋಧಕರು, ಸಾರ್ವಜನಿಕವಾಗಿಯಾಗಲೇ ಅಥವಾ ಖಾಸಗಿಯಾಗಿಯಾಗಲೇ, ಸತ್ಯವನ್ನು ಸದೃಢವಾಗಿ ಪುನರಾವರ್ತಿಸುವರು. "ಮೊದಲು ತಿಳಿಸಿದ ಮಾತುಗಳನ್ನು ತಿರಿಗಿ ನಿಮಗೆ ಬರೆಯುವದರಲ್ಲಿ ನನಗೇನು ಬೇಸರವಿಲ್ಲ" (ಫಿಲಿಪ್ಪಿ 3:1ಬಿ). ಬೋಧನೆಯ ಪ್ರತಿ ನಿಯೋಜನೆಯಲ್ಲಿ ಪುನರಾವರ್ತನೆಯು ಮುಂದುವರಿಯಬೇಕು. ಒಳ್ಳೆಯ ಬೋಧನೆಯು ಹೊಸದಾಗಿರುತ್ತದೆ ಅಥವಾ ವ್ಯತ್ಯಾಸವಾಗಿರುತ್ತದೆ ಎಂದು ಯೋಚಿಸುವುದಾದರೆ, ನಾವು ಯೇಸುವಿನ ಮತ್ತು ಅಪೊಸ್ತಲರು ಪುನರಾವರ್ತನೆ ಮಾಡಿದ ಸತ್ಯವನ್ನು ಹಿಡಿದುಕೊಂಡು ಆತ್ಮಗಳನ್ನು ಸುರಕ್ಷಿತವಾಗಿಟ್ಟುಕೊಳ್ಳಬೇಕು.

ಥೆಸಲೊನೀಕ ಪತ್ರಿಕೆಯಲ್ಲಿ, ಈ ಆಚರಣೆಯನ್ನು ಅನುಸರಿಸಲಾಗಿದೆ. ಪೌಲನು ತಾನು ಮಾಡಿದ ಬೋಧನೆಗಳ ಕುರಿತು ಅನೇಕ ಸಾರಿ ಪುನರಾವರ್ತನೆಯನ್ನು ಮಾಡಿರುವನು. ಈ ಸತ್ಯಗಳನ್ನು ಪರಿಪೂರ್ಣವಾಗಿ ಕಲಿತುಕೊಂಡು ತಮ್ಮ ಜೀವಮಾನ ಪರ್ಯಂತರ ಅದನ್ನು ಉಪಯೋಗಿಸಲಾಗಿದೆ.

ಮುಂದೆ ಸಂಭವಿಸಬಹುದಾದ ದೇವದೂಷಣೆಯ ಕುರಿತು ಥೆಸಲೊನೀಕದವರು ಈಗಾಗಲೇ ಎಚ್ಚರಿಕೆಯನ್ನು ಪಡೆದಿದ್ದರು, ಅಥವಾ ನಂಬಿಕೆಯನ್ನು ತೊರೆದು ಹೋಗುವ ಕುರಿತಾಗಿ ಎಚ್ಚರಿಸಲ್ಪಟ್ಟಿದ್ದರು. ತಾವು ಹೊಂದಿದ ಪ್ರಕಟನೆಯನ್ನು ಯಾರಾದರು ಒಬ್ಬನು ದೇವರಿಗೆ ಸವಾಲಾಗಿ ತೆಗೆದುಕೊಂಡಿದ್ದನು. ಯೇಸುವಿನ ಪುನರಾಗಮನದ ಮೊದಲು ಈ ಸಂಗತಿಯು ನಡೆಯುತ್ತದೆಂದು ಅವರು ಅರಿತಿದ್ದರು. ಅದು ಜರುಗದೇ, ಹೋದದ್ದರಿಂದ, ಯೇಸುವಿನ ಬರೋಣವು ಈಗಾಗಲೇ ನೇರವೇರಿರುವದು ಎಂಬ ತಪ್ಪು ಬೋಧನೆಯನ್ನು ಅಸತ್ಯವೆಂದು ತಿಳಿದಿದ್ದರು. ಆ ವರ್ತಮಾನದಿಂದ ಅವರು ಗೊಂದಲಕ್ಕೆ ಒಳಪಡುವ ಅಗತ್ಯತೆ ಇರಲಿಲ್ಲ, ಹಾಗೂ ದೇವರ ಮನಸ್ಸಿನಿಂದ ಬಂದಂತ ಬೋಧನೆಗಳನ್ನು ನೆನಪು ಮಾಡಿಕೊಳ್ಳುವಂತ ಅಗತ್ಯತೆಯು ಇತ್ತು.

## ಸತ್ಯೋಪದೇಶವನ್ನು ನಂಬಿರಿ (2:10-12)

ತಪ್ಪು ಬೋಧನೆಯನ್ನು ಜನರು ಅಂಗೀಕರಿಸುವಂತದ್ದು ನಮಗೆ ಆಶ್ಚರ್ಯವುಂಟುಮಾಡುತ್ತದೆ. ಸಂದೇಶವು ತಪ್ಪಾಗಿರುವದರಿಂದ, ಜನರು ಅದನ್ನು ತಿರಸ್ಕರಿಸುವರೆಂದು ನಾವು ಭಾವಿಸುತ್ತೇವೆ. ಹಲವಾರು ಸಾರಿ ಜನರು ಸತ್ಯವನ್ನು ತಿರಸ್ಕರಿಸಿ ಸುಳ್ಳು ಬೋಧ ನೆಯನ್ನು ಅಂಗೀಕರಿಸುತ್ತಾರೆ. ಅವರು ಹೇಗೆ ಇದನ್ನು ಮಾಡಲು ಸಾಧ್ಯ?

ಮನೋಭಾವವೇ ಇದಕ್ಕೆ ಉತ್ತರ. ತಪ್ಪುಗಳು ಆಕರ್ಷಕವಾಗಿರುತ್ತವೆ. ಉನ್ನತವಾದ ಜ್ಞಾನವನ್ನು ಹೊಂದಿರುವದು ಒಬ್ಬನ ವೈಯಕ್ತಿಕ ಗೌರವ ಅಥವಾ ಸ್ಥಾನವೆಂದು

ತಿಳಿಯುತ್ತೆವೆ. ಹೊಸ ಬೋಧನೆಯ ಅವಿಷ್ಕಾರದ ಆಶೆಯು ಸಹ ಇನ್ನೊಂದು ವಿಷಯ ವಾಗಿರುತ್ತದೆ. ಕೆಲವು ಸಾರಿ ತಪ್ಪನ್ನು ಅಂಗೀಕರಿಸುವದು ವ್ಯಕ್ತಿಯನ್ನು ಪ್ರಸಿದ್ಧಿಗೆ ತರುತ್ತದೆ ಯಾಕಂದರೆ ಸುಳ್ಳು ಬೋಧನೆಯನ್ನು ಒಪ್ಪಿಕೊಳ್ಳಲಾಗಿದೆ. ಒಂದು ವೇಳೆ ಇತರರು, ನಮ್ಮನ್ನು ತಿರಸ್ಕರಿಸಬಹುದೆಂಬ ಭಯದಿಂದ, ಅವರ ಬೋಧನೆಗಳನ್ನು ಒಪ್ಪಿಕೊಳ್ಳು ವದು ಮತ್ತು ಸ್ವೀಕರಿಸುವಂತದ್ದು ಹೆಚ್ಚಿನ ಸಂತೃಸುವಿಕೆಯನ್ನು ನೀಡುತ್ತದೆ. ಕೆಲವು ಸಾರಿ ಜನರು ತಪ್ಪು ಬೋಧನೆಯನ್ನು ಒಪ್ಪಿಕೊಳ್ಳುವರು ಯಾಕಂದರೆ ತಮ್ಮ ನಂಬಿಕೆಯ ಪರಿಣಾಮಗಳನ್ನು ನೋಡುವಲ್ಲಿ ಯಶಸ್ವಿಯಾಗುವದಿಲ್ಲ. ಆ ಸುಳ್ಳು ಬೋಧನೆಗಳು ದೇವರ ವಾಕ್ಯಕ್ಕೆ ವ್ಯತಿರಿಕ್ತವಾಗಿದ್ದು ಆತ್ಮಗಳಿಗೆ ಆಪಾಯವೆಂದು ಅರಿಯುವಲ್ಲಿ ಸೋತುಹೋಗಿದ್ದಾರೆ.

ಸತ್ಯವನ್ನು ಸಹ ಪ್ರೀತಿಸದೇ ಇರುವದು ಯಾವಾಗಲೂ ತಪ್ಪಿನ ಹಿಂಬದಿಯಲ್ಲಿರುತ್ತದೆ. ಸುಳ್ಳು ಬೋಧನೆಯನ್ನು ಒಪ್ಪಿ ಕೊಳ್ಳುವವರು ಸತ್ಯವನ್ನು ಪ್ರೀತಿಸುವ ಆಧ್ಯತೆಯನ್ನು ಹೊಂದಿರುವದಿಲ್ಲ; ಯಾಕಂದರೆ ಸುಳ್ಳು ಬಹಳ ಆಕರ್ಷಿಕವಾಗಿರುತ್ತದೆ. ಅವರಿಗೆ, ಸತ್ಯಕ್ಕಿಂತಲೂ ಸುಳ್ಳಿನಿಂದ ಸಿಕ್ಕುವಂತ ಗೌರವ, ಪ್ರಖ್ಯಾತಿಯು ಪ್ರಮುಖವಾಗಿರುತ್ತದೆ. ಸತ್ಯಕ್ಕೆ ಪ್ರೀತಿಯಿಲ್ಲದಿರುವದು ಆತ್ಮಗಳ ನಾಶದ ಅಪಾಯವಾ ಗಿರುತ್ತದೆ.

ಅವರು ಸತ್ಯದ ಮೇಲೆ ಪ್ರೀತಿಯನ್ನೀಡದ ಕಾರಣದಿಂದ ರಕ್ಷಣೆಯನ್ನು ಹೊಂದದೆ ನಾಶವಾಗುತ್ತಾರೆ. ಅದೇ ಕಾರಣದಿಂದ, ಅವರು ಸುಳ್ಳನ್ನೆ ಸತ್ಯವೆಂದು ತಿಳಿದಿರುವರು (2:10-12) ಎಂದು ಥೆಸಲೊನೀಕದವರನ್ನು ಎಚ್ಚರಿಸಲಾಗಿದೆ. ಅವರು ದೇವರ ಸತ್ಯ ವಾಕ್ಯದ ಶಕ್ತಿಯನ್ನರಿಯದೆ ನಾಶವಾಗುತ್ತಾರೆ.

ಕಷ್ಟವಾದ ಸಂದೇಶವು ನಮಗಿದೆ. ನಾವು ಸತ್ಯವನ್ನು ನಿರಾಕರಿಸಿದರೆ, ನಾವು ರಕ್ಷಣೆಯನ್ನೇ ನಿರಾಕರಿಸುತ್ತೇವೆ. ದೇವರು ಮತ್ತು ಆತನ ವಾಕ್ಯ ಒಟ್ಟಾಗಿ ಮುಂದುವರಿಯುವದರಿಂದ, ದೇವರ ಸತ್ಯ ಹಾಗು ಆತನ ರಕ್ಷಣೆಯೂ ಸಹ ಒಟ್ಟಾಗಿ ಮುಂದುವರಿಯುತ್ತದೆ. “ಕ್ರಿಸ್ತನ ಉಪದೇಶದಲ್ಲಿ ನೆಲೆಗೊಳ್ಳದೆ ಅದನ್ನು ಅತಿಕ್ರಮಿಸಿ ಮುಂದಕ್ಕೆ ಹೋಗುವವನಿಗೆ ದೇವರ ಅನ್ಯೋನ್ಯತೆಯಿಲ್ಲ. ಆ ಉಪದೇಶದಲ್ಲಿ ನೆಲೆಗೊಂಡಿರುವವನಿಗೆ ತಂದೆಯ ಮಗನ ಅನ್ಯೋನ್ಯತೆ ಉಂಟು'' (2 ಯೋಹನ 9) ಎಂದು ಬರೆದದೆ. ದೇವರ ಸತ್ಯವನ್ನು ಅರಿತು, ನಂಬಿಕೆಯ ಆಶೀರ್ವಾದವನ್ನು ಗಂಟು ಮಾಡಿಟ್ಟು ಕೊಳ್ಳಿರಿ. ಇದು ದೇವರೊಂದಿಗಿನ ಅನ್ಯೋನ್ಯತೆಗೆ ಮಾರ್ಗವಾಗಿರುತ್ತದೆ.

## ಮುಕ್ತಾಯ

ಸುಳ್ಳು ಪ್ರವಾದನೆಗಳು, ಒಬ್ಬನ ವೈಯಕ್ತಿಕ ನಂಬಿಕೆಯ ಜೀವನಕ್ಕೂ ಮತ್ತು ಸಭೆಗೂ ಒಂದು ಗಂಭೀರವಾದ ಸವಾಲಾಗಿರುತ್ತದೆ. ನಾವು ಅಪಾಯದ ತಪ್ಪುಗಳನ್ನು ಅರಿತು ಅವುಗಳಿಂದ, ನಮ್ಮ ನಂಬಿಕೆಯನ್ನು ಸಂರಕ್ಷಿಸಿಕೊಳ್ಳಬೇಕು. ಪ್ರತಿ ಕ್ರೈಸ್ತನು ಎಚ್ಚರವಾಗಿರಬೇಕು. ದೇವರ ಪ್ರೇರಿತವಾದ ವಾಕ್ಯಗಳಿಗೆ ವಿರೋಧವಾದಬೋಧನೆಗಳನ್ನು ಪರಿಶೀಲಿಸಬೇಕು. ಪ್ರತಿ ಉಪದೇಶಕನು ಎಚ್ಚರವಾಗಿದ್ದು ವಾಕ್ಯವನ್ನು ಅರಿತಿರಬೇಕು. ನಾವು ದೇವರನ್ನೆ ಪ್ರೀತಿಸುವವರಾಗಿ, ಆತನ ಬೋಧನೆಯ ಹೊರತಾಗಿ, ಇತರ ಯಾವುದೇ ಬೋಧನೆಗಳನ್ನು ಸ್ವೀಕರಿಸಬಾರದು. ಅದು ನಮ್ಮನ್ನು ದೇವದೂಷಣೆಯಿಂದ ದೂರವಿಟ್ಟು, ದೇವರು ಕ್ರಿಸ್ತನಲ್ಲಿ ನೀಡಿರುವ ನಂಬಿಕೆಯನ್ನು ಅಭಿವೃದ್ಧಿ ಮಾಡುತ್ತದೆ!

ದೇವರ ಬಯಕೆಗಳನ್ನು ಈಡೇರಿಸುವದಕ್ಕೆ ಪ್ರತಿ ಕ್ರೈಸ್ತನು ಸತ್ಯವನ್ನು ಮತ್ತು ಅದರ ಶಕ್ತಿಯನ್ನು ಹೊಂದಿಕೊಳ್ಳಬೇಕು - ಮತ್ತು ಇದರಿಂದ ಮಾರ್ಗದರ್ಶನವನ್ನು ರಕ್ಷಣೆಯನ್ನು ಮತ್ತು ನಿತ್ಯವಾದ ಸಂರಕ್ಷಣೆಯನ್ನು ಹೊಂದಿಕೊಳ್ಳಬೇಕು.